ದಿನಾಂಕಃ 10-04-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಜಿ ಕೆ ವಕೀಲರಿಂದಃ

1. ನಮ್ಮ ಘರಾಣೆದ ಮೂಲ ಪುರುಷ ಯಲ್ಲಪ್ಪ ತಂದೆ ಸಂಗನಬಸಪ್ಪ ಮಾಡಳ್ಳಿ. ಯಲ್ಲಪ್ಪನ ಹೆಸರಿನಲ್ಲಿ ಆಸ್ತಿಗಳು ಇದ್ದವು. ಯಲ್ಲಪ್ಪನಿಗೆ ಆಸ್ತಿಗಳು ಸಂಗನಬಸಪ್ಪನಿಂದ ಬಂದಿದೆ ಎಂದರೆ ಸರಿ. ಸಂಗನಬಸಪ್ಪನ ಹೆಸರಿನಲ್ಲಿ ನಾಲ್ಕು ಕೂರಿಗಿ ಆಸ್ತಿಗಳಿದ್ದವು. ಸಂಗನಬಸಪ್ಪ ಕಮತಾ ಮಾಡುತ್ತಿದ್ದ ಎಂದರೆ ಸರಿ. ಆತ ತೀರಿಕೊಂಡ ನಂತರ ಸದರಿ ಆಸ್ತಿಗಳು ಯಲ್ಲಪ್ಪನಿಗೆ ಬಂದವು ಎಂದರೆ ಸರಿ. ಯಲ್ಲಪ್ಪನಿಗೆ ಒಕ್ಕಲುತನ ಬಿಟ್ಟರೇ ಬೇರೆ ಉದ್ಯೋಗ ಇರಲಿಲ್ಲ ಎಂದರೆ ಸರಿ. ಯಲ್ಲಪ್ಪ ತೀರಿಕೊಂಡು 36 ವರ್ಷಗಳಾಗಿವೆ ಎಂದರೆ ಸಾಕ್ಷಿ 50 ವರ್ಷಗಳ ಮೇಲೆ ಆಗಿದೆ ಎಂದು ನುಡಿಯುತ್ತಾರೆ. ಯಲ್ಲಪ್ಪ ತೀರಿಕೊಂಡ ನಂತರ ಸದರಿ ಆಸ್ತಿಗಳು ಸಿದ್ದಲಿಂಗಪ್ಪ ಮತ್ತು ನನ್ನ ಚಿಕ್ಕಪ್ಪ ಚನ್ನಪ್ಪನಿಗೆ ಬಂದಿದೆ ಎಂದರೆ ಸರಿ. ಚನ್ನಪ್ಪ 2013 ರಲ್ಲಿ ತೀರಿಕೊಂಡಿದ್ದ ಎಂದರೆ ಸರಿ. ಆತನ ಹೆಂಡತಿ ಆತನಿಗಿಂತ ಮೊದಲೇ ತೀರಿಕೊಂಡಿದ್ದಳು ಎಂದರೆ ಸರಿ. ಆಸ್ತಿಗಳು ಚನ್ನಪ್ಪ ಮತ್ತು ಸಿದ್ದಲಿಂಗಪ್ಪ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿ ಅವರು ವಾಟ್ನಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಚನ್ನಪ್ಪ ಮತ್ತು ಸಿದ್ದಲಿಂಗಪ್ಪ ವಾಟ್ನಿ ಮಾಡಿಕೊಂಡು 50 ವರ್ಷಗಳ ಮೇಲಾಗಿದೆ. ಸದರಿ ವಾಟ್ನಿಯನ್ನು ಕಾಗದದ ಮೂಲಕ ಮಾಡಿಕೊಂಡಿದ್ದಾರೆ. ದಾವಾ ಹಾಕುವ ಕಾಲಕ್ಕೆ ನನ್ನ ತಂದೆ ಸಿದ್ಧಲಿಂಗಪ್ಪ ಜೀವಂತವಿದ್ದರು ಎಂದರೆ ಸರಿ.

2. ವಾಟ್ನಿ ಕಾಗದವನ್ನು ನಾನಾಗಲಿ ಅಥವಾ ಸಿದ್ಧಲಿಂಗಪ್ಪ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ಚನ್ನಪ್ಪ ಹಾಗೂ ಸಿದ್ಧಲಿಂಗಪ್ಪ ಎಂದಿಗೂ ವಾಟ್ನಿ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ತಂದೆ ವಾಟ್ನಿ ಆಗದೇ ಇದ್ದರೂ ವಾಟ್ನಿ ಆಗಿದೆ ಎಂದು ಉತಾರದಲ್ಲಿ ಅವರ ಹೆಸರುಗಳನ್ನು ಎಂಟ್ರಿ ಮಾಡಿಸಿದ್ದೀರಾ ಎಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲ್ 1 ರಿಂದ 6 ಮತ್ತು ಬಿ ಶೆಡ್ಯೂಲ್ 1 ರಿಂದ 4 ರ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸರ್ವೇ ನಂಬರ 108 ರಲ್ಲಿ 4 ಎಕರೆ ಜಮೀನನ್ನು ನನ್ನ ಚಿಕ್ಕಪ್ಪ ಬೇರೆ ಆದ ಮೇಲೆ ಖರೀದಿ ಹಿಡಿದಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಹಾಗೂ ಚಿಕ್ಕಪ್ಪ ಕಮತಾ ಮಾಡುತ್ತಿದ್ದರು ಎಂದರೆ ಸರಿ. ಸರ್ವೇ ನಂಬರ 164/6 ರ ಜಮೀನು ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನ್ನ ತಂದೆ ಖರೀದಿ ಹಿಡಿದ ಜಮೀನು ಎಂದು ನುಡಿಯುತ್ತಾರೆ. 20 ವರ್ಷಗಳ ಹಿಂದೆ ಶ್ರೀಧರ ತಂದೆ ದತ್ತಾತ್ರೇಯ ಕುಲಕರ್ಣಿ

ಅವರಿಂದ ನನ್ನ ತಂದೆ ಖರೀದಿ ಹಿಡಿದಿದ್ದಾರೆ. ಆ ಸಂಬಂಧ ಖರೀದಿ ಪತ್ರ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ.

3. ಖರೀದಿ ಹಿಡಿದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಅಣ್ಣ-ತಮ್ಮಂದಿರು ಹಾಗೂ ನನ್ನ ಚಿಕ್ಕಪ್ಪ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. 40 ವರ್ಷಗಳಿಂದ ಬೇರೆ ಬೇರೆ ಆಗಿ ವಾಸವಿದ್ದೇವು ಎಂದು ನುಡಿಯುತ್ತಾರೆ. ನಾನು ಹಾಗೂ ನನ್ನ ಚಿಕ್ಕಪ್ಪನ ರೇಶನ ಕಾರ್ಡ ಒಂದೇ ಮನೆಯ ವಿಳಾಸದಲ್ಲಿದೆ ಎಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲ್ ಆಸ್ತಿಗಳ ಸಂಬಂಧ ನನ್ನ ಅಣ್ಣ-ತಮ್ಮಂದಿರು ಹಾಗೂ ತಂದೆ ನಡುವೆ ವಿಭಾಗ ಆಗಿಲ್ಲ ಎಂದರೆ ಆಗಿದೆ. ಎ ಶೆಡ್ಯೂಲ್ ಜಮೀನುಗಳನ್ನು ನಾವುಗಳು ಸಾಮೂಹಿಕವಾಗಿ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿ. 2019 ರಲ್ಲಿ ನಿಮ್ಮ ತಂದೆಗೆ ಎಷ್ಟು ವಯಸ್ಸು ಆಗಿತ್ತು ಎಂದರೆ 80 ವರ್ಷ ಆಗಿತ್ತು ಎಂದು ನುಡಿಯುತ್ತಾರೆ. 6 ಎಕರೆ ಆಸ್ತಿ ಒಟ್ಟು ಕುಟುಂಬದ ಆಸ್ತಿಯಾದ ಕಾರಣ ನನ್ನ ತಂದೆಗೆ ಬಕ್ಸೀಸ್ ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿ ಖರೀದಿ ಹಿಡಿದ ಆಸ್ತಿ ಎಂದು ನುಡಿಯುತ್ತಾರೆ. ನನ್ನ ತಂದಗೆ ಕಮತಾ ಆದಾಯ ಹೊರತು ಪಡಿಸಿ ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. ನನ್ನ ತಂದೆಗೆ ವಯಸ್ಸಾಗಿದ್ದು, ಆತನಿಗೆ ಯಾವ ಕಾಗದ ಮಾಡುತ್ತಿದ್ದೇನೆ ಎಂಬ ಅರಿವೆ ಇರಲಿಲ್ಲ ಎಂಬುವುದನ್ನು ದುರುಪಯೋಗ ಪಡಿಸಿಕೊಂಡು ನಿಡಿ. 2 ರ ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ಆಸ್ತಿ ಕೊಡಬಾರದು ಎಂಬ ಉದ್ದೇಶದಿಂದ ನನ್ನ ಮಗನ ಹೆಸರಿಗೆ ಖೊಟ್ಟಿ ಕಾಗದ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

4. ನನ್ನ ಚಿಕ್ಕಪ್ಪ ಉಬ್ಬಸಾ (ದಮ್ಮು) ಖಾಯಿಲೆಯಿಂದ ತೀರಿಕೊಂಡಿದ್ದಾರೆ. ಸಾಯುವ 2-3 ವರ್ಷಗಳಿಂದ ಸದರಿ ಖಾಯಿಲೆ ಆತನಿಗೆ ಇತ್ತು. ಚಿಕ್ಕಪ್ಪ ತೀರಿಕೊಂಡಾಗ ಆತನಿಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ನಿಡಿ. 1 ರ ಮೃತ್ಯು ಪತ್ರವನ್ನು ಕುಂದಗೋಳದ ಪಡೋಸಿ ಅವರ ಹತ್ತಿರ ಬರೆಸಿದ್ದಾರೆ. ನಿಡಿ. 1 ನ್ನು ಮಲ್ಲಪ್ಪ, ಯಲ್ಲಪ್ಪ, ಈರಣ್ಣ, ಕೃಷ್ಣಗೌಡ ಮತ್ತು ನನ್ನ ಚಿಕ್ಕಪ್ಪ ಬಂದು ಬರೆಸಿಕೊಂಡು ಹೋಗಿದ್ದರು. ಸಾಕ್ಷಿದಾರರ ಸಾಕ್ಷಿ ಮಾಡಿಸಿದ್ದೀರಾ ಎಂದರೆ ಮಾಡಿಸಿದ್ದೇನೆ. ನನ್ನ ತಮ್ಮಂದಿರು ಧಮಕಿ ಹಾಕಿದ್ದಾರೆ. ಆ ಸಂಬಂಧ ನನ್ನ ತಮ್ಮನ ಮೇಲೆ ದೂರು ಕೊಟ್ಟಿದ್ದೀರಾ ಎಂದರೆ ಇಲ್ಲ. ನಿಡಿ. 1 ನ್ನು ನಾನು ಖೊಟ್ಟಿಯಾಗಿ ಸೃಷ್ಟಿಸಿದ ಕಾರಣ ಸಾಕ್ಷಿದಾರರು ನನ್ನ ಪರ ಸಾಕ್ಷಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ನನ್ನ ಹಾಗೂ ನನ್ನ ತಂದೆಯ ಹೆಸರಿಗೆ ಯಾವ ದಿನಾಂಕದಂದು ನಿಡಿ. 3 ಮೃತ್ಯು ಪತ್ರ ಮಾಡಿ ಕೊಟ್ಟಿದ್ದಾರೆ ಎಂದರೆ, ದಿನಾಂಕ ನನಗೆ ನೆನಪಿಲ್ಲ. ನಿಡಿ. 3 ನ್ನು ಪಡೋಸಿ ತಯಾರು ಮಾಡಿದ್ದಾರೆ. ನಿಡಿ. 3 ಬರೆಯುವ ಕಾಲಕ್ಕೆ ನಾನು ಬಂದಿರಲಿಲ್ಲ.

ಯಾರೆಲ್ಲ ಬಂದಿದ್ದರು ಎಂದರೆ ಸಾಕ್ಷಿ ಕಲ್ಲೂರ ಮಾರುತಿ, ಮಾಬುಸಾಬ ಮುಲ್ಲಾ ಬಂದಿದ್ದರು. ಕಲ್ಲೂರ ಹಾಗೂ ಮುಲ್ಲಾ ನಿಡಿ. 3 ಕ್ಕೆ ಸಹಿ ಮಾಡಿರುತ್ತಾರೆ. ಅವರನ್ನು ಬಿಟ್ಟು ಬೇರೆ ಯಾರಾದರೂ ಬಂದಿದ್ದರಾ ಎಂದರೆ ಸಾಕ್ಷಿ ನನ್ನ ತಂದೆ ಬಂದಿದ್ದರು. ಕಲ್ಲೂರ ಹಾಗೂ ಮುಲ್ಲಾನನ್ನು ನನ್ನ ತಂದೆ ಕರೆದುಕೊಂಡು ಬಂದಿದ್ದರು ಎಂದರೆ ಸರಿ. ನಿಡಿ. 3 ತಯಾರು ಮಾಡುವಾಗ ನನ್ನ ಚಿಕ್ಕಪ್ಪ ಬಂದಿರಲಿಲ್ಲ ಹಾಗೂ ನಿಡಿ. 3 ರಲ್ಲಿರುವ ಸಹಿ ನನ್ನ ಚಿಕ್ಕಪ್ಪನದ್ದಲ್ಲ ಎಂದರೆ ಸರಿಯಲ್ಲ. ಚಿಕ್ಕಪ್ಪನ ಅಸ್ತಿಯನ್ನು ಹೊಡೆಯಬೇಕೆಂದು ಎಂಬ ಉದ್ದೇಶದಿಂದ ಖೊಟ್ಟಿ ಕಾಗದ ಸೃಷ್ಟಿಸಿದ್ದೇವೆ, ನನ್ನ ಚಿಕ್ಕಪ್ಪ ಮೃತ್ಯು ಪತ್ರ ಮಾಡಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಿಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.